# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1371(1621)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಪಿ. ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು )

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಮಾರಾಟದ ಕುರಿತು

(ಅ) ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಮಾರಾಟದಿಂದ ರಾಜ್ಯದ ಬೊಕ್ಕಸಕ್ಕೆ ಬಂದಿರುವ ಒಟ್ಟು ಸುಂಕದ ಮೊತ್ತವೆಷ್ಟು; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಮೂಲ ಬೆಲೆ ಮತ್ತು ಸರಬರಾಜು ವೆಚ್ಚಗಳಿಗೆ ಕೇಂದ್ರದಿಂದ ಅಬಕಾರಿ ಸುಂಕ+ವಿತರಕರ ಕಮೀಷನ್ ವಿಧಿಸಿದ ನಂತರ ಬರುವ ಮೊತ್ತಕ್ಕೆ ರಾಜ್ಯ ಸರ್ಕಾರದಿಂದ ಎಷ್ಟು ಮೊತ್ತದ ಮೌಲ್ಯಧಾರಿತ ತೆರಿಗೆ (VAT) ವಿಧಿಸಲಾಗುತ್ತಿದೆ; ಎಲ್ಲಾ ವಿವರಗಳನ್ನು ನೀಡುವುದು;

(ಇ) ರಾಜ್ಯದಿಂದ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳಿಗೆ ವಿಧಿಸುವ ಮೌಲ್ಯಧಾರಿತ ತೆರಿಗೆಗೆ, ರಾಜ್ಯದಲ್ಲಿ ಸದರಿ ತೈಲಗಳಿಗೆ ಯಾವ ರೀತಿಯಲ್ಲಿ ಮೌಲ್ಯವರ್ದನ ಪ್ರಕ್ರಿಯೆ ಜಾರಿಯಲ್ಲಿದೆ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಮೂಲ ಬೆಲೆ ಮತ್ತು ಸರಬರಾಜು ವೆಚ್ಚಗಳಿಗೆ ಕೇಂದ್ರದಿಂದ ಅಬಕಾರಿ ಸುಂಕ+ ವಿತರಕರ ಕಮೀಷನ್ ವಿಧಿಸಿದ ನಂತರ ಬರುವ ಮೊತ್ತಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ತೆರಿಗೆ ಅಥವಾ ಸುಂಕ ವಿಧಿಸುವ ಬದಲು ಮೂಲ ತೈಲದ ಬೆಲೆಗೆ ವಿಧಿಸುವ ಪ್ರಸ್ತಾಪ ಸರ್ಕಾರದ ಬಳಿ ಇದೆಯೇ; (ವಿವರ ನೀಡುವುದು)

(ಉ) ಇತ್ತೀಚೆಗೆ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೈಲಗಳ ಬೆಲೆ ಹೆಚ್ಚಳವಾಗಿರುವ ಪರಿಣಾಮದಿಂದ (Spiral Effect) ಜನಸಾಮಾನ್ಯರಿಗೆ ತೊಂದರೆ ಉಂಟಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು? (ವಿವರ ನೀಡುವುದು)